NP – 008

# I Semester B.C.A. Examination, May 2022
## (NEP – 2021 – 22 and Onwards)
### ಕನ್ನಡ ಭಾಷಾ ಪತ್ಯ (ಪೇಪರ್ – I)
### ಗಣಕ ಕನ್ನಡ

Time : 2½ Hours Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (80 ಪದಗಳಿಗೆ ಮೀರದಂತೆ) : **(4×5=20)**

1) ಸಕಲ ಪಾತಕಗಳು ಬೆಂದು ಹೋಗುತ್ತವೆಂದು ಕವಿ ಹೇಳಲು ಕಾರಣ ?

2) ಕನ್ನಡಾಭಿಮಾನದ ಕುರಿತು ಬೇಂದ್ರೆಯವರ ಅಭಿಪ್ರಾಯವೇನು ?

3) ಮುಕುಂದಣ್ಣ ಯಾರೊಂದಿಗೆ ಸಲುಗೆಯಿಂದ ಇರುತ್ತಿದ್ದ ಹಾಗೂ ಏಕೆ ? ಚರ್ಚಿಸಿ.

4) ಗೆಲಿಲಿಯೋವಿನ ಜೀವನದ ಕಡೆಗಾಲದ ಶಿಷ್ಯ ಯಾರು ? ಅವನು ಕಂಡು ಹಿಡಿದದ್ದು ಏನು ?

5) ಶಂಕರನ ಪತ್ರಕ್ಕಾಗಿ ಶಾಂತಿ ಕಾಯಲು ಕಾರಣವೇನು ?

6) ಜಗತ್ತಿನ ಆರು ಸಾವಿರ ಭಾಷೆಗಳಲ್ಲಿ ಜೀವಂತಿಕೆಯ ದೃಷ್ಟಿಯಿಂದ ಕನ್ನಡದ ಸ್ಥಾನ ಎಷ್ಟನೆಯದೆಂದು ಚರ್ಚಿಸಿ.

II. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ) : **(2×10=20)**

1) ಬಂಡವಾಳಗಾರ ಕೊಂಡು ಮಾರುವ ಭಾಷಾ ಮಾಧ್ಯಮ ಎಂದು ಹೇಳಲು ಕಾರಣ ? ವಿವರಿಸಿ.

2) 'ಒಂದು ಚಿತ್ರಕಥೆ'ಯ ಆಶಯವನ್ನು ನಿಮ್ಮದೇ ದೃಷ್ಟಿಕೋನದಲ್ಲಿ ವಿವರಿಸಿ.

3) 'ಎಷ್ಟೊಂದು ಮುಗಿಲು' ಕವಿತೆಯ ಸ್ವಾರಸ್ಯವೇನು ? ವಿವರಿಸಿ.

III. ಕೆಳಕಂಡ ಪತ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ. **(1×3=3)**

ನಾನು ಬೆಳಗಾವಿಯಲ್ಲಿ ಒಂಬತ್ತು ವರ್ಷ ಕೆಲಸ ಮಾಡಿದ್ದೆ. ಅಲ್ಲಿ ಇದಕ್ಕೆ ತದ್ವಿರುದ್ಧವಾದ ಸನ್ನಿವೇಶವಿತ್ತು. ಅಲ್ಲಿನ ಮಹಾನಗರ ಪಾಲಿಕೆಯಲ್ಲಿ ಮರಾಠಿ ಆಡಳಿತವೇ ಇದ್ದುದರಿಂದ ಅದು ಕನ್ನಡ ಶಾಲೆಗಳಿಗೆ ಯಾವ ಸವಲತ್ತುಗಳನ್ನು ಕೊಡುತ್ತಿರಲಿಲ್ಲ. ಅಲ್ಲಿನ ಸ್ಥಳೀಯ ಶಾಲೆಗಳು ಪಾಲಿಕೆಯ ಸುಪರ್ದಿಗೆ ಒಳಪಟ್ಟಿದ್ದವು. ತೀರ ಇತ್ತೀಚೆಗೆ ಅಂದರೆ ಹತ್ತಿಪ್ಪತ್ತು ವರ್ಷಗಳ ಹಿಂದೆ ಬೆಳಗಾವಿ ಹೊರವಲಯದ ಕಂಗ್ರಾಳಿಖುರ್ದು ಎಂಬ ಊರಿನ ಶಾಲೆಯಲ್ಲಿ ಕನ್ನಡ ಮಕ್ಕಳು ಬಯಲಿನಲ್ಲಿ ಮರದ ಕೆಳಗೂ, ಮರಾಠಿ ಮಕ್ಕಳು ಸುಸಜ್ಜಿತ ಕಟ್ಟಡದ ಒಳಗೂ ಕಲಿಯುತ್ತಿದ್ದರು. ಅದು ಕೂಡ ನಿಧಾನವಾಗಿ ವಿಷ ಉಣಿಸುವ ಕೆಲಸ. ವ್ಯತ್ಯಾಸವೆಂದರೆ ರಾಜ್ಯ ಭಾಷೆಯ ಶಾಲೆಗಳು ಪಕ್ಕದ ರಾಜ್ಯದ ಮರಾಠಿ ಭಾಷೆಯಡಿ, ತೊತ್ತಳದುಳಿತಕ್ಕೆ ಒಳಗಾಗಿಯೂ ಅಲ್ಲಿನ ಕನ್ನಡ ಶಾಲೆಗಳು ಉಳಿದುದೇ ದೊಡ್ಡ ಕಥೆ.

ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳು ಸುಸ್ಥಿತಿಯಲ್ಲಿ ಇರುವುದಿಲ್ಲ. ಬೆಂಚುಗಳು ಇದ್ದರೆ, ಅಲ್ಲಿ ಪುಸ್ತಕಗಳು ಇರುವುದಿಲ್ಲ. ಪುಸ್ತಕಗಳು ಇದ್ದರೆ ಅಲ್ಲಿ ಕಂಪ್ಯೂಟರ್‌ಗಳು ಇರುವುದಿಲ್ಲ. ಹೀಗೆಯೇ ಸರಕಾರಿ ಶಾಲೆಗಳಲ್ಲಿ ಇರಲಿಲ್ಲ ಅನ್ನುವ ಪಟ್ಟಿಯ ಸರಮಾಲೆಯೇ ಬೆಳೆಯುತ್ತಾ ಹೋಗುತ್ತದೆ. ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿಯಾದರೇ ಅಲ್ಲಿ ಕಲಿಸುವ ಶಿಕ್ಷಕರ ಗುಣಮಟ್ಟ ಹೇಗೆಯೇ ಇರಲಿ, ಅದು ಆಕರ್ಷಕವಾಗಿ ಇರುತ್ತದೆ. ಥಳುಕು ಬಳುಕಿನದು ಅನ್ನಿಸುತ್ತದೆ.

ಕಾಲಕ್ಕೆ ತಕ್ಕಂತೆ ಕನ್ನಡ ಶಾಲೆಗಳು ಸುಧಾರಣೆ ಆಗಬೇಕಿತ್ತು. ಅಲ್ಲಿ ಸೌಕರ್ಯಗಳು ಹೆಚ್ಚಬೇಕಿತ್ತು. ಅಲ್ಲಿ ಮಕ್ಕಳಿಗೆ ಬೆಂಚುಗಳು ಬರಬೇಕಿತ್ತು. ಕಂಪ್ಯೂಟರ್‌ಗಳು ಬರಬೇಕಿತ್ತು. ಇಂಗ್ಲೀಷ್ ಅನ್ನು ಒಂದು ಭಾಷೆಯಾಗಿ ಕಲಿಸಲು ತಕ್ಕ ಸಿದ್ಧತೆಗಳು ಬಹಳ ಆರಂಭದ ಹಂತದಲ್ಲಿಯೇ ಆಗಬೇಕಿತ್ತು. ಅವರಿಗೆ ಮೂತ್ರ ಮಾಡಲು ಒಳ್ಳೆಯ ಜಾಗ ಇರಬೇಕಿತ್ತು. ಹೆಣ್ಣು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ಇರಬೇಕಿತ್ತು. ಅದು ಯಾವುದೂ ಆಗಲಿಲ್ಲ. ಅಲ್ಲಿನ ಕಟ್ಟಡಗಳ ಸ್ಥಿತಿ ದಾರುಣವೆಂಬಂತೆ ಇತ್ತು. ಯಾವುದೇ ಗತಿಯಿಲ್ಲದ, ಬಡಬಗ್ಗರ, ನಿರ್ಗತೀಕರ ಮಕ್ಕಳು ಮಾತ್ರ ಅಂತಹ ಶಾಲೆಗೆ ಬರುತ್ತಾರೆ ಎನ್ನುವಂತೆ ಆಯಿತು. ಕನ್ನಡ ಶಾಲೆಗಳು ಆಕರ್ಷಣೆ ಕಳೆದುಕೊಂಡವು. ಅದೇ ಕಾಲಕ್ಕೆ ಇತ್ತ ಕಲಿಕೆಯ ಮಟ್ಟ ಅಷ್ಟೇನೂ ಚೆನ್ನಾಗಿ ಇಲ್ಲದೇ ಇದ್ದರೂ, ಆಡಂಬರದ ಆಂಗ್ಲಮಾಧ್ಯಮ ಶಾಲೆಗಳು ತಲೆ ಎತ್ತಿದವು.

'ಓ' ಅಂದರೆ 'ಕೋ' ಎನ್ನಲೂಬಾರದ 2 ವರ್ಷ, 3 ವರ್ಷದ ಹಸುಳೆಗಳನ್ನು ಕರೆದುಕೊಂಡು ಹೋಗಿ ಆಂಗ್ಲ ಖಾಸಗೀ ಮಾಧ್ಯಮದ ಶಾಲೆಗಳ ಆಡಳಿತ ವರ್ಗದ ಮುಂದೆ ಸಂದರ್ಶನಕ್ಕೆ ಹಾಜರುಮಾಡಿದ ಪಾಪಿಗಳು ನಾವೇ ಅಲ್ಲವೆ ? . . .

IV. ಸಂಕ್ಷೇಪ ಮಾಡಿದ ಮೇಲಿನ ಬರಹವನ್ನು ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. (2×1=2)

V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ : (2×1=2)

1) ಪ್ರಾದೇಶಿಕ ಭಾಷೆ

2) ಹಳೇರಾಗ

3) ಅನುಭವಾಮೃತ

4) ಗಾಳಿಮಾತು.

VI. ವರ್ಗಾವಣೆ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಅರ್ಜಿ ಬರೆಯಿರಿ. (1×4=4)

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ : (4×1=4)

1) ಲಲಿತವಹ

2) ಗಣಕ

3) ಗಡಿಬಿಡಿ

4) ಕುಗ್ರಾಮ.

VIII. ಇವುಗಳಲ್ಲಿ ಒಂದು ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ (ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ). **(5×1=5)**

1) ಮಹಲಿಂಗ ರಂಗನ ನಿಜವಾದ ಹೆಸರೇನು ?

1) ರಂಗ
2) ರಂಗನಾಥ
3) ರಂಗಪ್ಪ
4) ಪಾಂಡುರಂಗ

2) ಡಾ ॥ ಚಂದ್ರಶೇಖರ್ ಕಂಬಾರರು ಜನಿಸಿದ ಊರ ಹೆಸರೇನು ?

1) ಧಾರವಾಡ
2) ಬೆಳಗಾವಿ
3) ಘೊಡಗೇರಿ
4) ಹುಬ್ಬಳ್ಳಿ

3) ಬೇಬಿಯ ಮೊದಲ ಹೆಸರೇನು ?

1) ಫಾತಿಮಾ
2) ಮುಬೀನಾ
3) ಜರೀನಾ
4) ಸುಮತಿ

4) ಸುಧೀಂದ್ರ ಹಾಲ್ದೊಡ್ಡೇರಿ ಜನಿಸಿದ ವರ್ಷ ಯಾವುದು ?

1) 1960
2) 1965
3) 1970
4) 1975

5) ಕನ್ನಡ ವಿಶ್ವವಿದ್ಯಾಲಯವಿರುವುದು ಎಲ್ಲಿ?

1) ಹಂಪಿ
2) ಕಂಪ್ಲಿ
3) ಕೊಪ್ಪಳ
4) ಗಂಗಾವತಿ

---